**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.448/2023**

**PW-1 CW-1**

| | | |
|---|---|---|
| ಸಾಕ್ಷಿದಾರನ ಹೆಸರು | : | ಹನುಮಂತ ತಂದೆ ಭೀಮಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಗಣೇಕಲ್ |
| ಪ್ರಮಾಣಿಕರಿಸಿದ ದಿನಾಂಕ | : | 25-10-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಈಗ ಕಳೆದ 02 ವರ್ಷಗಳ ಹಿಂದೆ ಬೆಳಿಗ್ಗೆ 10-00 ಗಂಟೆಯ ಸುಮಾರಿಗೆ ಗಣೇಕಲ್ ಗ್ರಾಮದ ನಮ್ಮ ಮನೆಯಲ್ಲಿ ನಾನು, ನಮ್ಮ ಅತ್ತೆ ಮಲ್ಲಿಗೆಮ್ಮ, ನಾಗರಾಜ ಮಾತನಾಡುತ್ತಾ ಕುಳಿತಿರುವಾಗ 1 ನೇ ಆರೋಪಿ ಪಾರ್ವತಿ, ಅವರ ಅತ್ತೆ ಹಾಗೂ ಮಲ್ಲಿಕಾರ್ಜುನ ಬಂದು ನನ್ನ ಅತ್ತೆಯ ಕೂದಲನ್ನು ಮಲ್ಲಿಕಾರ್ಜುನ ಮತ್ತು ಆತನ ಹೆಂಡತಿ ಹಿಡಿದು ಎಳೆದಾಡಿರುತ್ತಾರೆ. ನಾಗರಾಜ ಇತನಿಗೆ ಎದೆಯ ಮೇಲಿನ ಅಂಗಿ ಹಿಡಿದು ಚಪ್ಪಲಿಯಿಂದ ಹೊಡೆದಿರುತ್ತಾರೆ. ಇಷ್ಟನ್ನು ಹೊರತುಪಡಿಸಿ ಬೇರೆ ಏನು ಗೊತ್ತಿರುವುದಿಲ್ಲ. ಪೊಲೀಸ ಠಾಣೆಗೆ ನಾನೇ ದೂರನ್ನು ನೀಡಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಎಸ್ ವಕೀಲರು ಶ್ರೀ ವಿ.ಡಿ.ಸಿ ವಕೀಲರ ಪರವಾಗಿ ಪಾಟೀ ಸವಾಲೀಗಾಗಿ ಕಾಲಾವಕಾಶ ಕೇಳಿದ್ದು, ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.